ಪಿ ಡಬ್ಲ್ಯೂ-02

**<u>ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತುಃ</u>**

**<u>ಮುಂದುವರೆದ ಮುಖ್ಯ ವಿಚಾರಣೆ ಅರ್ಜಿದಾರರ ಪರ ಶ್ರೀ ಕೆ ಇ ಯು ವಕೀಲರಿಂದಃ</u>**

ಈ ದಿನ ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ಸತ್ಯವಾಗಿದ್ದು, ನಾನೇ ಹೇಳಿ ಬರೆಸಿದ್ದೇನೆ, ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ.

ನಾನು ಈ ಕೆಳಕಂಡ ದಾಖಲೆಗಳನ್ನು ನನ್ನ ಪರವಾಗಿ ನಿಶಾನೆಗಳೆಂದು ಗುರುತಿಸಿಕೊಂಡಿರುತ್ತೇನೆಃ-

ನಿಪಿ-11. ಗಾಯದ ಪ್ರಮಾಣ ಪತ್ರದ ದೃಡೀಕೃತ ನಕಲು,

ನಿಪಿ-12. ಅನ್ರಕ್ರಮ 1 ರಿಂದ 70 ಔಷಧ ಮತ್ತು ಆಸ್ಪತ್ರೆ ಬಿಲ್ಲುಗಳು,

ನಿಪಿ-13. ಅನುಕ್ರಮ 1 ರಿಂದ 4 ಸಲಹಾ ಚೀಟಿಗಳು,

ನಿಪಿ-14. ಎಂಟು ಲ್ಯಾಬ್ ವರದಿಗಳು,

ಎನಪೋಯ ಆಸ್ಪತ್ರೆಯ ಡಿಸ್ ಚಾರ್ಜ್ ಸಮ್ಮರಿಯ ನಕಲು ಪ್ರತಿಯನ್ನು ಹಾಜರು ಮಾಡಿರುತ್ತಾರೆ.

**<u>ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಬಿ ಎಂ ಆರ್ ವಕೀಲರಿಂದಃ</u>**

ನಾನು 5 ನೇ ತರಗತಿವರೆಗು ಓದಿರುತ್ತೇನೆ. ನಾನು ಈಗ ದೇವಪುರದಹಟ್ಟಿ ಗ್ರಾಮದಲ್ಲಿ ವಾಸವಿರುತ್ತೇನೆ. ನಾನು ಏನು ಕೆಲಸ ಮಾಡುತ್ತಿಲ್ಲಾ, ಮನೆಯಲ್ಲಿಯೇ ಇರುತ್ತೇನೆ. ನನ್ನ ಗಂಡನ ಹೆಸರು ಗೋವಿಂದ ನಾಯಕ, ನನ್ನ ಗಂಡನ ತಂದೆಯ ಹೆಸರು ರಂಗನಾಯಕ. ನನ್ನ ಗಂಡ ಮೃತ ಪಟ್ಟು ಒಂದೂವರೆ ವರ್ಷ ಆಗಿದೆ. ನನ್ನ ಗಂಡ ಮಂಗಳೂರಿನ ಆಸ್ಪತ್ರೆಯಲ್ಲಿ ಮೃತಪಟ್ಟನು. ನನ್ನ ಗಂಡ ಮಂಗಳೂರಿನ ಮಂಗಳೂರು ಆಸ್ಪತ್ರೆಯಲ್ಲಿ ಮೃತಪಟ್ಟನು. ಸದರಿ ಆಸ್ಪತ್ರೆಯಲ್ಲಿ ನನ್ನ ಗಂಡ ಮೂರು ತಿಂಗಳು ಒಳರೋಗಿಯಾಗಿ ದಾಖಲಾಗಿದ್ದನು. ನನ್ನ ಗಂಡ ಕುಡಿತದ ಚಟದಿಂದ ಆರೋಗ್ಯದಲ್ಲಿ

ಏರುಪೇರಾಗಿ ಮೂರು ತಿಂಗಳು ಆಸ್ಪತ್ರೆಯಲ್ಲಿ ದಾಖಲಾಗಿದ್ದು, ಅವರು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟರು ಎಂದರೆ ಸರಿಯಲ್ಲ. ಒಳರೋಗಿಯಾಗಿ ಚಿಕಿತ್ಸೆ ಪಡೆದಾಗ ಆಸ್ಪತ್ರೆಯು ಚಿಕಿತ್ಸಾ ದಾಖಲೆಗಳನ್ನು ನೀಡುತ್ತಾರೆ ಎಂದರೆ ಸರಿ. ನನ್ನ ಗಂಡ ಮೂರು ತಿಂಗಳು ಒಳರೋಗಿಯಾಗಿ ಚಿಕಿತ್ಸೆ ಪಡೆದು ಯಾವ ಕಾರಣಕ್ಕಾಗಿ ಮೃತಪಟ್ಟಿದ್ದು ಎಂದು ದಾಖಲಾತಿ ಇರುತ್ತದೆ ಎಂದರೆ ಸಾಕ್ಷಿಯು ಆ ದಾಖಲೆಯನ್ನು ಪಡೆದುಕೊಂಡು ಬರಬೇಕು ಎನ್ನುತ್ತಾರೆ. ನಿಪಿ-12 ರಲ್ಲಿ ಅನುಕ್ರಮ ಸಂಖ್ಯೆ 38 ರಿಂದ 70 ದಾಖಲೆಗಳು ಎನಪೋಯ ಆಸ್ಪತ್ರೆಯ ದಾಖಲೆಗಳು ಎಂದರೆ ನನಗೆ ಗೊತ್ತಿಲ್ಲ. ನಿಪಿ-12 ರ ಅನುಕ್ರಮ ಸಂಖ್ಯೆ 1 ದಾಖಲೆಯು ಕೂಡ ಎನಪೋಯ ಆಸ್ಪತ್ರೆಯ ದಿನಾಂಕ 08.05.2023 ರ ಒಳರೋಗಿಯ ಬಿಲ್ಲಿನಲ್ಲಿ ಹೃದಯರೋಗಿ ಸಂಬಂಧಿತ ವಾರ್ಡ್ ನಲ್ಲಿ ಚಿಕಿತ್ಸೆ ಪಡೆದ ಬಗ್ಗೆ ನಮೂದು ಇದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-12 ರ ಅನುಕ್ರಮ ಸಂಖ್ಯೆ 37 ದಾಖಲೆಯು ದಿನಾಂಕ 22.04.2022 ರಂದು ಚಿಕಿತ್ಸೆ ಪಡೆದ ಕುರಿತು ದಾಖಲೆಯನ್ನು ಹಾಜರು ಮಾಡಿಲ್ಲ ಎಂದರೆ ಸರಿಯಲ್ಲ. ನಿಪಿ-12 ರ ಅನುಕ್ರಮ ಸಂಖ್ಯೆ 17 ದಾಖಲೆಯು ಹೃದಯರೋಗಿ ಸಂಬಂಧದ ಬಿಲ್ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಗಂಡ ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ಮೃತಪಟ್ಟಿದ್ದು, ಆ ಕುರಿತು ಶವ ಪರೀಕ್ಷಾ ವರದಿಯನ್ನು ಮಾಡಿಸಿರುವುದಿಲ್ಲ. ಗೋವಿಂದ ನಾಯಕನಿಗೆ ಚಿತ್ರದುರ್ಗ ಸರ್ಕಾರಿ ಆಸ್ಪತೆಯಲ್ಲಿ ಚಿಕಿತ್ಸೆ ಕೊಟ್ಟಾಗ ಯಾವುದೇ ರೀತಿಯ ಶಸ್ತಚಿಕಿತ್ಸೆ ಕೊಟ್ಟಿಲ್ಲ ಎಂದರೆ ಸರಿ. ಚಿತ್ರದುರ್ಗ ಸರ್ಕಾರಿ ಆಸ್ಪತೆಯಲ್ಲಿ ಚಿಕಿತ್ಸೆಯಲ್ಲಿ ಆದಂತಹ ಗಾಯಗಳಿಗೆ ಎನಪೋಯ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಿದರು ಎಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-12 ರಲ್ಲಿ 1 ರಿಂದ 70 ಬಿಲ್ಲುಗಳು ಗೋವಿಂದ ನಾಯಕನಿಗೆ ಅಪಘಾತದಲ್ಲಿ ಆದ ಗಾಯಗಳಿಗೆ ನೀಡಿದ ಚಿಕಿತ್ಸೆಯ ಬಿಲ್ಲುಗಳು ಅಲ್ಲ, ಅವು ಹೃದಯರೋಗಕ್ಕೆ ಚಿಕಿತ್ಸೆ ನೀಡಿದ ದಾಖಲೆಗಳು ಎಂದರೆ ಸರಿಯಲ್ಲ. ಎನಪೋಯ ಆಸ್ಪತ್ರೆಯಲ್ಲಿ ಯಾವ ಕಾರಣಕ್ಕಾಗಿ ನನ್ನ ಗಂಡನಿಗೆ ಚಿಕಿಸ್ಸೆ ಕೊಟ್ಟರು ಎಂದು ಹೇಳಲು ಅವರನ್ನು ಸಾಕ್ಷಿ ಮಾಡಿಸಲು ನನಗೆ ಯಾವುದೆ ತೊಂದರೆ ಇಲ್ಲ. ನನ್ನ ಗಂಡ

ಅಪಘಾತದಿಂದ ಆದ ಗಾಯಗಳಿಂದ ಮೃತಪಟ್ಟಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಅಪಘಾತದ ಸಮಯದಲ್ಲಿ ಚಾಲನ ಪತ್ರ ಇತ್ತು ಎಂದು ತೋರಿಸಲು ನನಗೆ ತೊಂದರೆ ಇಲ್ಲ. ಅಪಘಾತದ ಸಮಯದಲ್ಲಿ ಮೋಟಾರ್ ಸೈಕಲ್ ಚಾಲಕನಿಗೆ ಚಾಲನ ಪತ್ರ ಇಲ್ಲದ್ದರಿಂದ, 2 ನೇ ಎದುರುದಾರರು ಪರಿಹಾರ ನೀಡಲು ಭಾದ್ಯಸ್ಥರಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಕೃಷಿ ಕೆಲಸದಿಂದ ಮತ್ತು ವ್ಯಾಪಾರದಿಂದ ತಿಂಗಳಿಗೆ 40 ಸಾವಿರ ರೂಪಾಯಿ ದುಡಿಯುತ್ತಿದ್ದರು ಎಂದು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚುಮಾಡಲಾಯಿತು}**

ಓ ಹೇ ಕೇ ಸರಿ ಇದೆ

ಪ್ರಧಾನ ಹಿರಿಯ ಸಿವಿಲ್ ಮತ್ತು ಸಿ ಜೆ ಎಂ ನ್ಯಾಯಾಧೀಶರು

ಚಿತ್ರದುರ್ಗ